



# ಬಬಲ್‌ಗಮ್ ಗೋಡೆ

ಸಿಯಾಟೆಲ್‌ನ ಪೈಕ್ ಪ್ಲೇಸ್ ಮಾರುಕಟ್ಟೆಯಲ್ಲಿರುವ ರಂಗಮಂದಿರ ಅಲ್ಲಿನ ಸ್ಥಳೀಯ ಹೆಗ್ಗುರುತುಗಳಲ್ಲೊಂದು. ಇದರ ಗಲ್ಲಾಪೆಟ್ಟಿಗೆ ಕಡೆಗಿರುವ, 50 ಅಡಿ ಉದ್ದ 15 ಅಡಿ ಎತ್ತರದ ಗೋಡೆಯು ಸಂಪೂರ್ಣವಾಗಿ ಚೂಯಿಂಗ್‌ಗಮ್‌ನಿಂದ ಆವೃತವಾಗಿತ್ತು. 1993ರಲ್ಲಿ ಅಭಿಮಾನಿಗಳು ಈ ಗೋಡೆಗೆ ಚೂಯಿಂಗ್ ಗಮ್ ಅಂಟಿಸಿ ಅದರ ಮೇಲೆ ನಾಣ್ಯಗಳನ್ನಿರಿಸಿ ಸಂಭ್ರಮಿಸಿದರು. ಹೀಗೆ ಆರಂಭವಾದ ರೂಢಿಗೆ ಕಡಿವಾಣ ಹಾಕುವುದು ಕಠಿಣವಾಯಿತು. ಅನೇಕ ಸಲ ಸ್ವಚ್ಛಗೊಳಿಸಿದರೂ ಮತ್ತೆ ಮತ್ತೆ ಬಬಲ್‌ಗಮ್ ಅಂಟಿಸುವುದು ಮುಂದುವರೆಯುತ್ತಿತ್ತು. 1999ರಲ್ಲಿ ಮಾರ್ಕೆಟ್ ಅಧಿಕಾರಿಗಳು ಈ ಗೋಡೆಯನ್ನು ಪ್ರವಾಸೀ ತಾಣವೆಂದು ಪರಿಗಣಿಸಿದ ನಂತರ ಸ್ವಚ್ಛಗೊಳಿಸುವ ಕ್ರಿಯೆ ಸಂಪೂರ್ಣವಾಗಿ ನಿಂತಿತು. ಅನೇಕರು ಬಬಲ್‌ಗಮ್‌ನ ಪುಟ್ಟ ಕಲಾಕೃತಿಗಳನ್ನು ಸೃಜಿಸಿದರು. ಛಾಯಾಚಿತ್ರಗಳಲ್ಲಿ, ಸಿನೆಮಾಗಳಲ್ಲಿ ಈ ಗೋಡೆ ಚಿರಂತನವಾಯಿತು. 2009ರಲ್ಲಿ ಇದನ್ನು ರೋಗಾಣುಗಳಿಂದ ಕೂಡಿದ 5 ಪ್ರವಾಸೀ ತಾಣಗಳಲ್ಲಿ ಒಂದೆಂದು ಘೋಷಿಸಲಾಯಿತು. ಆದರೂ ಪ್ರವಾಸಿಗಳ ಸಂಖ್ಯೆಯೇನೂ ಕಡಿಮೆಯಾಗಲಿಲ್ಲ.

ಇದೇ ನವೆಂಬರ್ ಮೂರರಂದು ಈ ಗೋಡೆಯನ್ನು ಸ್ವಚ್ಛಗೊಳಿಸಲು ಸ್ಥಳೀಯ ಮಂಡಳಿ ನಿರ್ಧರಿಸಿತು. ನವೆಂಬರ್ ಹತ್ತರಂದು ಆರಂಭವಾದ ಈ ಸ್ವಚ್ಛತಾಕಾರ್ಯ ಹದಿಮೂರರಂದು ಮುಗಿಯಿತು. ಈ ಗೋಡೆಯಿಂದ ತೆಗೆಯಲಾದ ಚೂಯಿಂಗ್‌ಗಮ್‌ನ ತೂಕ 2,350 ಪೌಂಡುಗಳಿಗಿಂತಲೂ (ಸುಮಾರು 1070 ಕಿಲೋಗ್ರಾಂ) ಅಧಿಕವಾಗಿತ್ತಂತೆ!

ಇತ್ತೀಚೆಗೆ ಪ್ಯಾರಿಸ್‌ನಲ್ಲಿ ಉಗ್ರರ ದಾಳಿಗೆ ಬಲಿಯಾದವರ ಸ್ಮರಣಾರ್ಥ ರಚಿಸಿರುವ ಬಬಲ್‌ಗಮ್ ಕಲಾಕೃತಿಯೂ ಸೇರಿದಂತೆ ಮತ್ತೆ ಚೂಯಿಂಗ್‌ಗಮ್ ಈ ಗೋಡೆಯ ಮೇಲೆ ರಾರಾಜಿಸತೊಡಗಿದೆಯಂತೆ!

■ ಮಂಜುನಾಥ ಡಿ.ಎಸ್.

